**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ. 65/2025**

ಸಾಕ್ಷಿದಾರರ ಹೆಸರು ಆಶಾ ಸಿ ಸಿ.ಡಬ್ಲ್ಯೂ: 1 ಪಿ.ಡಬ್ಲ್ಯೂ:1
ತಂದೆಯ ಹೆಸರು ಜಿ.ಎನ್. ಸಂತೋಷ್
ವಯಸ್ಸು 33 ವರ್ಷ
ಉದ್ಯೋಗ ಗೃಹಿಣಿ
ವಾಸ ಸ್ಥಳ ಗೋಣೀಬೀಡು

ದಿನಾಂಕ: 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನ್ನ ಗಂಡನ ತಂದೆ. 2 ನೇ ಆರೋಪಿ ನನ್ನ ಗಂಡನ ತಾಯಿ. ಚಾಸಾ.2 ನನ್ನ ಗಂಡ. ದಿ: 22.12.2024 ರಂದು ಬೆಳಿಗ್ಗೆ 9.00 ರ ಸುಮಾರಿಗೆ ಚಾಸಾ.2 ರವರು ಕೆಲಸಕ್ಕೆ ಹೋಗಿದ್ದರು. ಮಕ್ಕಳು ಶಾಲೆಗೆ ಹೋಗಿದ್ದರು. ಆ ಸಮಯದಲ್ಲಿ ಮನೆಯ ಸಿ.ಸಿ ಕ್ಯಾಮರವನ್ನು 1 ನೇ ಆರೋಪಿ ತಿರುಗಿಸಿ ಮನೆಯ ಬಳಿ ಬಂದು ನನ್ನನ್ನು ಕರೆದರು. ನಾನು ಬಾಗಿಲು ತೆಗೆದು ಹೊರಗೆ ಬಂದಾಗ ಮನೆಯನ್ನು ಬಿಟ್ಟು ಹೋಗು ಇಲ್ಲದಿದ್ದರೆ ನಿನ್ನನ್ನು ಮತ್ತು ಗಂಡ ಮಕ್ಕಳನ್ನು ಕೊಲೆ ಮಾಡುತ್ತೇನೆ ಎಂದು ಹೇಳಿ ನೀಲಗಿರಿ ರೀಪೀಸ್ ನಿಂದ ಎದೆ ಮತ್ತು ಹೊಟ್ಟೆಯ ಭಾಗಕ್ಕೆ ಹೊಡೆದರು. ನಂತರ ನಾನು ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ 5 ದಿನ ದಾಖಲಾಗಿದ್ದೆ. ನನ್ನ ಗಂಡ ಕೆಲಸದಿಂದ ಬಂದ ಬಳಿಕ ದಿ: 23.12.2024 ರಂದು ದೂರನ್ನು ಪೊಲೀಸರಿಗೆ ನೀಡಿದ್ದೆವು.

2. ನಂತರ ಪೊಲೀಸರು ಸ್ಥಳಕ್ಕೆ ಬಂದು ದಿ: 29.12.2024 ರಂದು ಮಹಜರ್ ಮಾಡಿದರು. ಕೃತ್ಯ ನಡೆದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದೆ. ಪೊಲೀಸರಿಗೆ ನೀಲಗಿರಿ ದೊಣ್ಣೆಯನ್ನು ನಾನು ನೀಡಿದೆ. ಛಾಯಚಿತ್ರಗಳನ್ನು

ತೆಗೆದಿದ್ದರು. ಇಬ್ಬರು ಸಾಕ್ಷಿದಾರರನ್ನು ನಾನು ಕರೆಸಿದ್ದೆ. 14-15 ವರ್ಷಗಳಿಂದ 1 ಮತ್ತು 2 ನೇ ಆರೋಪಿತರು ನನಗೆ ತೊಂದರೆ ನೀಡುತ್ತಿದ್ದಾರೆ. ತೋಟವನ್ನು ಧಾನ ಪತ್ರವನ್ನು ನನ್ನ ಗಂಡನಿಗೆ ಆರೋಪಿತರು ಮಾಡಿಕೊಟ್ಟಿದ್ದರು. ಸದರಿ ತೋಟ ಅಭಿವೃದ್ಧಿಯಾದ ಬಳಿಕ ಸದರಿ ತೋಟವನ್ನು ಎ.ಸಿ ನ್ಯಾಯಾಲಯದಿಂದ ತಮ್ಮ ವಶಕ್ಕೆ ಪಡೆದರು. ಆರೋಪಿತರು ನೀಡಿದ ಜಾಗದಲ್ಲಿ ಮನೆಯನ್ನು ನಿರ್ಮಿಸಿದ್ದೆವು, ಆ ಮನೆಯನ್ನು ಬಿಟ್ಟು ಹೋಗಿ ಎಂದು ಒತ್ತಾಯಿಸುತ್ತಿದ್ದಾರೆ.

3. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ 3 ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ ಎಂದು ಸಾಕ್ಷಿ ಗುರುತಿಸಿದ್ದರಿಂದ ಅವುಗಳನ್ನು ನಿ.ಪಿ.3 ರಿಂದ 5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುದ್ದೆ ಮಾಲುಗಳನ್ನು ಹಾಜರು ಪಡಿಸಲು ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸ.ಸ.ಅ ರವರು ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿನಾಂಕಃ 05.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

4. ನ್ಯಾಯಾಲಯದ ಮುಂದಿರುವ ನೇರಳೇ ಮರದ ರೀಪಿಸ್ ನಿಂದಲೇ ಹಲ್ಲೆ ಮಾಡಿದ್ದರು ಎಂದು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಸ್.ಎ. ವಕೀಲರಿಂದ – ಆರೋಪಿತನ ಪರವಾಗಿ

5. ಮು.ಮಾ.1 ಅನ್ನು ಪೊಲೀಸರಿಗೆ ನಾನೇ ನೀಡಿದ್ದೆ. ಪೊಲೀಸರು ನಮ್ಮ ಮನೆಗೆ ಎಫ್.ಐ.ಆರ್ ದಾಖಲಿಸಲು ದಿಃ 29 ರಂದು ಬಂದಾಗ ನೀಡಿದ್ದೇನೆ. ಮು.ಮಾ.1 ಅನ್ನು ವಿಳ್ಯೆದೆಲೆಗೆ ಮನೆಯಲ್ಲಿ ಇಟ್ಟಿದ್ದನ್ನು ಪೊಲೀಸರು ಬಂದಾಗ ನೀಡಿದ್ದೇನೆ. ಮು.ಮಾ.1 ಅನ್ನು ನನ್ನಿಂದ ಪಡೆಯುವಾಗ ಅದರ ಮೇಲೆ ಚೀಟಿಯನ್ನು ಅಂಟಿಸಲಿಲ್ಲ. ನನ್ನ ಸಹಿಯನ್ನು ಮು.ಮಾ.1 ರ ಮೇಲೆ ಪಡೆದಿದ್ದರು. ಮು.ಮಾ.1 ರ ಮೇಲೆ ನನ್ನ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ಮು.ಮಾ.1 ನೇರಳೆ ಮರದ್ದು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ನಾವು ಮನೆಯ ಕಿಟಿಕೆಗೆ ನೇರಳೆ ಮರದ ಕಟ್ಟಿಗೆಯನ್ನೇ ಭಳಸಿದ್ದೆವು ಎಂದು ನುಡಿಯುತ್ತಾರೆ. ವಿಳ್ಯೆದೆಲೆಯ ಬಳ್ಳಿಗೆ ಮು.ಮಾ.1 ರಷ್ಟು ದಪ್ಪ ಕಟ್ಟಿಗೆಯನ್ನು ಯಾರು ಬಳಸುವುದಿಲ್ಲ ಎಂದರೆ ಸಾಕ್ಷಿ ಮನೆಯನ್ನು ನಿರ್ಮಿಸಲು ಬಳಸಿ ಉಳಿದ ಕಟ್ಟಿಗೆಯಾಗಿದ್ದರಿಂದ ಅದನ್ನು ವಿಳ್ಯೆದೆಲೆ ಬಳ್ಳಿಗೆ ಹಾಕಿದ್ದೆವು ಎಂದು ನುಡಿಯುತ್ತಾರೆ. ಮು.ಮಾ.1 ರ 2 ತುದಿಯಲ್ಲಿಯು ಸಹ ಮಣ್ಣು ಆಗಿರುವುದು ಕಂಡು ಬರುವುದಿಲ್ಲ ಎಂದರೆ ಸರಿ. ಮು.ಮಾ.1 ರೀಪೀಸ್ ನಿಂದ ಆರೋಪಿತರು ನನಗೆ ಹೊಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಅನ್ನು ನಾನು ಸೃಷ್ಟಿಸಿ ಮನೆಯಿಂದ ತಂದು ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ತೂಕವಾಗಿದೆ ಎಂದರೆ ಸರಿ. ಮು.ಮಾ.1 ರಿಂದ ಹೊಡೆದರೆ ಮೂಳ ಮುರಿತದ ಗಾಯ ಆಗುತ್ತದೆ ಎಂದರೆ ಸಾಕ್ಷಿ ಪೆಟ್ಟಿನ ಗಾಯ ನನಗೆ ಆಗಿದೆ ಎಂದು ನುಡಿಯುತ್ತಾರೆ. ಮು.ಮಾ.1

ಅನ್ನು ಎಲ್ಲಾ ತುದಿಗಳು ಸಹ edge ನಿಂದ ಕೂಡಿದ್ದು, ಅದರಿಂದ ಹೊಡೆದರೆ ಸೀಳಿದ ಗಾಯ ಆಗುತ್ತದೆ ಎಂದರೆ ಸಾಕ್ಷಿ ನನಗೆ ಸೀಳಿದ ಗಾಯ ಆಗಿತ್ತು ಎಂದು ನುಡಿಯುತ್ತಾರೆ.

6. ಪೊಲೀಸರಿಗೆ ನಾನು ಆರೋಪಿತರು ನನ್ನ ದೇಹದ ಇಂತಹದೇ ಭಾಗಗಳಿಗೆ ಹಲ್ಲೆ ಮಾಡಿದ್ದರು ಎಂದು ಹೇಳಿದ್ದೇನೆ. ಗೋಣಿಬೀಡುವಿನಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ನಾನು 2 ಬಾರಿ ಗೋಣಿಬೀಡು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ಗೋಣಿಬೀಡು ಸರ್ಕಾರಿ ಆಸ್ಪತ್ರೆಯ ವೈದ್ಯರೇ ನನ್ನ ಗಾಯಗಳನ್ನು ಅಳತೆ ಮಾಡಿದ್ದರು. ಗೋಣಿಬೀಡು ಸರ್ಕಾರಿ ಆಸ್ಪತ್ರೆಯಲ್ಲಿ ನನಗೆ injection ನೀಡಿ ಮಾತ್ರೆ ನೀಡಿದ್ದರು. ಬ್ಯಾಂಡೇಜ್ ಹಾಕಿಲಿಲ್ಲ, ಔಷಧಿಯನ್ನು ಹಾಕಿದ್ದರು. ಗೋಣಿಬೀಡು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳುವುದಿಲ್ಲ ಎಂದು ಬೆಳಿಗ್ಗೆ 9.00 ಗಂಟೆಗೆ ಹೇಳಿದ್ದರು. ಆ ದಿನ ಮೂಡಿಗೆರೆ ಆಸ್ಪತ್ರೆಗೆ ಒಬ್ಬಳೇ ಬಂದಿದ್ದೆ. ಮೂಡಿಗೆರೆ ಆಸ್ಪತ್ರೆಗೆ ಬಂದಾಗ 10.30 ರಿಂದ 11.00 ರ ಸಮಯ ಆಗಿತ್ತು. ಮೂಡಿಗೆರೆ ಆಸ್ಪತ್ರೆಯಲ್ಲಿ ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ.

7. ಮೂಡಿಗೆರೆ ಆಸ್ಪತ್ರೆಯ ವೈದ್ಯರಿಗೆ ನಾನು ಗೋಣಿಬೀಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ವಿಚಾರವನ್ನು ತಿಳಿಸಿದ್ದೆ. ಗೋಣಿಬೀಡು ಆಸ್ಪತ್ರೆಯ ವೈದ್ಯರು ನೀಡಿದ ದಾಖಲೆಯನ್ನು ಮೂಡಿಗೆರೆ ಆಸ್ಪತ್ರೆಯ ವೈದ್ಯರಿಗೆ ನಾನು ನೀಡಲಿಲ್ಲ. ನಮ್ಮ ಮನೆ ಗೋಣಿಬೀಡು ಪೇಟೆಯಲ್ಲಿಯೇ ಬರುತ್ತದೆ. ಪೊಲೀಸ್ ಠಾಣೆಯಿಂದ ನಮ್ಮ ಮನೆ 1 ಕಿ.ಮೀ ಅಂತರದಲ್ಲಿ ಇದೆ. ನಮ್ಮ ಮನೆಯಿಂದ ಆಸ್ಪತ್ರೆ 250 ಅಡಿ ಅಂತರದಲ್ಲಿ ಇದೆ. ಆಸ್ಪತ್ರೆಯಿಂದ ಪೊಲೀಸ್ ಠಾಣೆಗೆ 250 ಅಡಿ ಅಂತರ ಇದೆ. ನಾನು ಮೊದಲು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿ ಪೊಲೀಸರು ಆಸ್ಪತ್ರೆಗೆ ಹೋಗುವಂತೆ ತಿಳಿಸಿದ್ದರಿಂದ ಮೂಡಿಗೆರೆ ಆಸ್ಪತ್ರೆಗೆ ಹೋಗಿದ್ದೆ.

8. ಪೊಲೀಸ್ ಠಾಣೆಗೆ ಹೋದಾಗ 9.45 ರ ಸಮಯ ಆಗಿತ್ತು. ಪೊಲೀಸರಿಗೆ ನಾನು ಘಟನೆಯ ವಿವರವನ್ನು ತಿಳಿಸಿದ್ದೆ. ನಾನು 8 ನೇ ತರಗತಿ ವರೆಗೆ ಕಲಿತಿದ್ದೇನೆ. ಪೊಲೀಸರಿಗೆ ನಾನು ದೂರನ್ನು ಬರೆದುಕೊಡಲಿಲ್ಲ, ಪೊಲೀಸರು ಮೊದಲು

ಆಸ್ಪತ್ರೆಗೆ ಹೋಗುವಂತೆ ನನಗೆ ತಿಳಿಸಿದ್ದರು. ನನ್ನ ಜೊತೆ ಆಸ್ಪತ್ರೆಗೆ ಪೊಲೀಸರು ಬರಲಿಲ್ಲ. ನಾನು ಪೋನ್ ಅನ್ನು ಬಳಸುತ್ತಿರಲಿಲ್ಲ. ನನ್ನ ಗಂಡ ಮೂಡಿಗೆರೆ ಬೆಂಗಳೂರು ಕೆ.ಎಸ್.ಆರ್.ಟಿ.ಸಿ ಚಾಲಕರಾಗಿದ್ದಾರೆ. ನಾನು ಗಲಾಟೆಯಾದ ತಕ್ಷಣ ನನ್ನ ಗಂಡನಿಗೆ ವಿಚಾರವನ್ನು ತಿಳಿಸಲಿಲ್ಲ, ಮೂಡಿಗೆರೆ ಆಸ್ಪತ್ರೆಗೆ ಬಂದು ದಾಖಲಾದ ಬಳಿಕ ವಿಚಾರವನ್ನು ತಿಳಿಸಿದ್ದೇನೆ. ನನ್ನ ಗಂಡ ರಾತ್ರಿ 8.30 ರಿಂದ 9.00 ರ ಸುಮಾರಿಗೆ ಬಂದು ಆಸ್ಪತ್ರೆಯಲ್ಲಿ ಭೇಟಿ ಮಾಡಿದರು. ಅಲ್ಲಿಯವರೆಗೂ ನನ್ನ ತಾಯಿ ನನ್ನನ್ನು ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತಿದ್ದರು.

9. ಪೊಲೀಸರು ಆಸ್ಪತ್ರೆಗೆ ಬರಲಿಲ್ಲ. ನಾನು ಮೂಡಿಗೆರೆ ಆಸ್ಪತ್ರೆಯಲ್ಲಿ ದಾಖಲಾದ ಬಳಿಕ ಬಂದಿದ್ದರು. ನಾನು ಕರೆ ಮಾಡಿದ ಬಳಿಕ ರಾತ್ರಿ 10.30 ರ ಸುಮಾರಿಗೆ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ನಾನು ಪೊಲೀಸ್ ಠಾಣೆಗೆ ಹೋಗಿ ಬಂದಿದ್ದೇನೆ ಎಂಬ ವಿಚಾರವನ್ನು ವೈದ್ಯರಿಗೆ ತಿಳಿಸಿದ್ದೆ. ನಾನು ಆಸ್ಪತ್ರೆಗೆ ದಾಖಲಾದಾಗ ಮಕ್ಕಳು ದೊಡ್ಡವರಾದ ಕಾರಣ ಅವರು ಮನೆಯಲ್ಲಿ ಇದ್ದರು. ನಮ್ಮ ಮನೆಯ ಪಕ್ಕದಲಿ ಜೈನುದ್ದಿನ್ ಎಂಬುವವರು ವಾಸವಿದ್ದಾರೆ ಎಂದರೆ ಸರಿ. ನಮ್ಮ ಮನೆಯ ಎದುರಿಗೆ ಗಣೇಶ್ ಎಂಬುವವರ ಅಂಗಡಿ ಇರುತ್ತದೆ. ನಮ್ಮ ಮನೆಯ ಅಕ್ಕ ಪಕ್ಕದಲ್ಲಿ ಮನೆಗಳು ಇವೆ ಎಂದರೆ ಸರಿ. ನಮ್ಮ ಮನೆಯ ಅಕ್ಕ ಪಕ್ಕದವರು ನನ್ನ ಜೊತೆ ಚೆನ್ನಾಗಿ ಇದ್ದಾರೆ ಎಂದರೆ ಸಾಕ್ಷಿ ನಾನು ಯಾರನ್ನೂ ಮಾತನಾಡಿಸಲು ಹೋಗುವುದಿಲ್ಲ ಎಂದು ನುಡಿಯುತ್ತಾರೆ.

10. ಗಲಾಟೆಯಾಗುವಾಗ ಯಾರು ಬಿಡಿಸಲು ಬರಲಿಲ್ಲ, ನೋಡುತ್ತಾ ನಿಂತಿದ್ದರು. ದೂರಿನಲ್ಲಿ ಗಲಾಟೆಯಾಗುವಾಗ ನೋಡುತ್ತಾ ಜನರು ನಿಂತಿದ್ದರು ಎಂದು ನಾನು ಹೇಳಿಲ್ಲ. ಆರೋಪಿತರು ಮೊದಲಿನಿಂದಲು ನನಗೆ ಹಿಂಸೆ ನೀಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಊರು ಶಿವಮೊಗ್ಗ ಜಿಲ್ಲೆಯ ಭದ್ರಾ ಡ್ಯಾಮ್ ಎಂಬ ಊರು ಆಗಿರುತ್ತದೆ. ನನ್ನ ತಂದೆಯ ಮನೆ ಸರ್ಕಾರದಿಂದ ಮಂಜೂರಾದ ಮನೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿಯ ಮನೆಯಲ್ಲಿ ಜಮೀನು ಇರುತ್ತದೆ. ಆರೋಪಿತರು ಸಂತೆಯಲ್ಲಿ

ನಿಂಬೆಹಣ್ಣು ಮತ್ತು ಸಾಂಬಾರು ಸೊಪ್ಪನ್ನು ಮಾರಾಟ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಸಂತೆಯಲ್ಲಿ ವ್ಯಾಪಾರ ಮಾಡುವ ವಿಚಾರ ಗೊತ್ತು, ಏನು ಮಾರಾಟ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

11. ನನ್ನ ತಂದೆಯ ಮನೆಯವರು ಬಿ.ಪಿ.ಎಲ್ ಕಾರ್ಡು ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಈಗ ಬದುಕಿಲ್ಲ ಎಂದರೆ ಸರಿ. ನಾನು 2 ವರ್ಷದವಳಿದ್ದಾಗ ನಮ್ಮ ತಂದೆ ತೀರಿಕೊಂಡಿದ್ದರು. ನನ್ನನ್ನು ಮದುವೆ ಮಾಡಿಕೊಂಡು ಬರುವಾಗ ಆರೋಪಿತರು 10 ಲಕ್ಷ ಖರ್ಚು ಮಾಡಿ ನನಗೆ 20 ತೊಲ ಬಂಗಾರವನ್ನು ನೀಡಿದ್ದರು ಎಂದರೆ ಸಾಕ್ಷಿ ನಮ್ಮ ತಾಯಿಯು 20 ಗ್ರಾಮ ಚಿನ್ನವನ್ನು ನೀಡಿದ್ದರು ಎಂದು ನುಡಿಯುತ್ತಾರೆ. ನಾನು ಈಗ ವಾಸವಿರುವ ಮನೆಯ ನಿವೇಶನ ಮತ್ತು ಮನೆ ನಿರ್ಮಿಸಿರುವ ಲೆಸನ್ಸ್, ವಿದ್ಯುತ್ ಸಂಪರ್ಕ, ನೀರಿನ ಸಂಪರ್ಕ ಆರೋಪಿತರ ಹೆಸರಿನಲ್ಲಿ ಇದೆ ಎಂದರೆ ಸರಿ. ನಾವು ವಾಸವಿರುವ ಮನೆಯಿಂದ 5 ಅಡಿ ಅಂತರದಲ್ಲಿ ಆರೋಪಿತರ ಮನೆ ಬರುತ್ತದೆ. ಆರೋಪಿತರು ವಾಸವಿರುವ ಮನೆ ಹಳೆ ಮನೆ ಎಂದರೆ ಸರಿ. ನಾವು ವಾಸವಿರುವ ಮನೆಯಾಗಿ 3 ವರ್ಷ ಕಳೆದಿದೆ. ಆರೋಪಿತರ ಹೆಸರಿನಲ್ಲಿ 3 ಎಕರೆ 30 ಗುಂಟೆ ಕಾಫಿ ತೋಟ ಇದೆ ಎಂದರೆ ನನಗೆ ಗೊತ್ತಿಲ್ಲ.

12. ನನ್ನ ಗಂಡನ ಹೆಸರಿಗೆ 1 ಎಕರೆ 30 ಗುಂಟೆ ಕಾಫಿ ತೋಟವನ್ನು ದಾನ ಪತ್ರದ ಮೂಲಕ ನೀಡಿದ್ದರು ಎಂದರೆ ಸಾಕ್ಷಿ ಬರೆದುಕೊಟ್ಟ 8 ತಿಂಗಳಲ್ಲಿ ವಾಪಸ್ಸು ಪಡೆದಿದ್ದರು ಎಂದು ನುಡಿಯುತ್ತಾರೆ. ಆರೋಪಿತರು 8 ತಿಂಗಳಲ್ಲಿ ಆ ಆಸ್ತಿಯನ್ನು ವಾಪಸ್ಸು ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಚಾಸಾ.2 ಆರೋಪಿತರಿಗೆ ತೊಂದರೆ ನೀಡುತ್ತಿದ್ದ ಕಾರಣ ಆರೋಪಿತರು ಹಿರಿಯ ನಾಗರೀಕ ರಕ್ಷಣೆ ಕಾಯ್ದೆ ಅಡಿ ಎ.ಸಿ ರವರಿಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ನಾನು ಸಲ್ಲಿಸಿದ ದೂರಿನಿಂದ ಬಚಾವಾಗಲು ಆ ರೀತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಗಂಡ ಆರೋಪಿತರಿಗೆ ತೊಂದರೆ ನೀಡುತ್ತಿರುವುದು ವಿಚಾರಣೆ ಕಾಲದಲ್ಲಿ ಸಾಭೀತಾದ ಕಾರಣ ಎ.ಸಿ ರವರು ದಿಃ

30.10.2025 ರಂದು ಆದೇಶ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದಂತೆ ಎ.ಸಿ ರವರು ದಾನ ಪತ್ರವನ್ನು ರದ್ದು ಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ತಿಳಿದಿದ್ದರು ಸಹ ಆರೋಪಿತರೇ ದಾನ ಪತ್ರವನ್ನು ರದ್ದು ಪಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಸಂದೀಪ್ ಎಂಬುವವರು ನನ್ನ ಗಂಡನ ಸಹೋದರನಾಗಬೇಕು. ಸಂದೀಪ್ ರವರು ಅಭಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಗಂಡನ ಸಹೋದರ ಸಂದೀಪ್ ರವರಿಗೆ ಸಹ 1 ಎಕರೆ 30 ಗುಂಟೆ ಜಮೀನನ್ನು ದಾನ ಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಂದೀಪ್ ರವರು ಬಂದರೆ ನಮ್ಮ ಮನೆಗೆ ಬರುವುದಿಲ್ಲ ಎಂದರೆ ಸಾಕ್ಷಿ ಅವರು ಬರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿಗೆ ಸೌಭಾಗ್ಯ ಎಂಬ ಸಹೋದರಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ಎಕರೆ 30 ಗುಂಟೆ ಜಮೀನನ್ನು ನನ್ನ ಗಂಡನ ಸಹೋದರ ಸಂದೀಪ್ ರವರಿಗೆ ಆರೋಪಿತರು ಬರೆದುಕೊಟ್ಟಿರುವುದರಿಂದ ನಮಗೆ ಅಸಮಾಧಾನ ಇದೆ ಎಂದರೆ ಸುಳ್ಳು. ನನ್ನ ಗಂಡನ ಸಹೋದರ ಅಭಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಸಂಪೂರ್ಣ ಜಮೀನನ್ನು ನಮಗೆ ಬರೆದುಕೊಡಬೇಕು ಎಂಬ ಉದ್ದೇಶವನ್ನು ನಾನು ಮತ್ತು ನನ್ನ ಗಂಡ ಹೊಂದಿದ್ದೇವು ಎಂದರೆ ಸುಳ್ಳು. ಆರೋಪಿತರು ಅದಕ್ಕೆ ಒಪ್ಪದ ಕಾರಣ ಅವರ ಮೇಲೆ ನಾವು ದ್ವೇಷ ಹೊಂದಿದ್ದೇವೆ ಎಂದರೆ ಸರಿಯಲ್ಲ.

14. ಆರೋಪಿತರು ವಾಸವಿರುವ ಹಳೆಯ ಮನೆಯ ಸೈಟ್ ಅನ್ನು ಖರೀದಿಸಲು 2 ನೇ ಆರೋಪಿಯ ತಂಗಿ ಸೌಭಾಗ್ಯ ಹಣ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸೌಭಾಗ್ಯ ಮತ್ತು ಆಕೆಯ ಮಕ್ಕಳು ಆರೋಪಿತರ ಮನೆಗೆ ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ತಮ್ಮ ಜೀವಿತ ಅವಧಿಯಲ್ಲಿ ಸೌಭಾಗ್ಯ ಮತ್ತು ಆಕೆಯ ಮಕ್ಕಳಿಗೆ ತಾವು ವಾಸವಿರುವ ಮನೆಯನ್ನು ಬಿಟ್ಟುಕೊಡುತ್ತಾರೆ ಎಂಬ ಸಂಶಯ ಇದೆ ಎಂದರೆ ಸರಿಯಲ್ಲ. ಮದುವೆಯಾದ ಆರಂಭದಲ್ಲಿ ನಾವು ಬಾಡಿಗೆ ಮನೆಯಲ್ಲಿ ಇದ್ದೇವು ಎಂದರೆ ಸಾಕ್ಷಿ ನಮ್ಮ ಗಂಡನ ಅಜ್ಜ ಬೀಮ ಶೇಟ್ ರವರ

ಮನೆಯಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ಅಜ್ಜನ ಆ ಮನೆಯಲ್ಲಿ 12 ವರ್ಷ ವಾಸವಿದ್ದೆವು. ಆ ಮನೆ ಈಗ ವಾಸವಿರುವ ಮನೆಯಿಂದ 150 ಅಡಿ ಅಂತರದಲ್ಲಿ ಇದೆ. ನಾವು ನನ್ನ ಗಂಡನ ಅಜ್ಜನ ಮನೆಯಲ್ಲಿ ವಾಸವಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ, ಬಾಡಿಗೆ ಮನೆಯಲ್ಲಿ ವಾಸವಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆ ಮನೆಯಲ್ಲಿ ಬಾಡಿಗೆಯನ್ನು ಪಾವತಿಸಿ ಮಕ್ಕಳ ವಿದ್ಯಾಭ್ಯಾಸ ಮಾಡಿಸುವುದು ಕಷ್ಟ ಆಗುತ್ತದೆ, ಆ ಕಾರಣದಿಂದ ನಾವು ಈಗ ವಾಸವಿರುವ ಮನೆಯನ್ನು ಬಿಟ್ಟುಕೊಡಬೇಕು ಎಂದು ಆರೋಪಿತರನ್ನು ಕೇಳಿದ್ದೆವು ಎಂದರೆ ಸುಳ್ಳು. ಆರೋಪಿತರು ತಾವು ನಿರ್ಮಿಸಿದ ಮನೆಯನ್ನು ಚಾಸಾ.2 ಅವರ ಮಗನಾದ ಕಾರಣ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ.

15. ನಾವು ಈಗ ಇರುವ ಮನೆ, ಹಳೆಯ ಮನೆ ಮತ್ತು ಸಂಪೂರ್ಣ ಜಮೀನನ್ನು ನಮಗೆ ಬರೆದುಕೊಡಬೇಕು ಎಂದು ಆರೋಪಿತರನ್ನು ಒತ್ತಾಯಿಸಿ ಗಲಾಟೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ವಾಸವಿರುವ ಮನೆಯನ್ನು ನಮಗೆ ಬರೆದುಕೊಡದೇ ಇದ್ದರೆ ಪ್ರಾಣ ಸಹಿತಾ ಬಿಡುವುದಿಲ್ಲ ಎಂದು ಬೆದರಿಕೆಯನ್ನು ಆರೋಪಿತರಿಗೆ ಹಾಕುತ್ತಿದ್ದೆವು ಎಂದರೆ ಸುಳ್ಳು. ಮನೆಗೆ ಸಂಬಂಧಿಸಿದಂತೆ ದಾನ ಪತ್ರವನ್ನು 5 ವರ್ಷಗಳ ಹಿಂದೆಯೇ ಬರೆದುಕೊಟ್ಟಿದ್ದಾರೆ. ಸದರಿ ದಾಖಲೆಯನ್ನು ಆರೋಪಿತರೇ ವಾಪಸ್ಸು ಪಡೆದಿದ್ದಾರೆ. ಆರೋಪಿತರಿಗೆ ವಯಸ್ಸಾದ ಕಾರಣ ಬೇರೆಯವರಿಗೆ ಆಸ್ತಿಯನ್ನು ಬರೆದುಕೊಡಬಾರದು ನಮಗೆ ಬರೆದುಕೊಡೆಬೇಕು ಎಂದು ಪದೇ ಪದೇ ಒತ್ತಾಯಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡನ ಸಹೋದರ ಸಂದೀಪ್ ಯಾವ ಊರಿನಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ಆಸ್ತಿಯನ್ನು ನಮಗೆ ಬರೆದುಕೊಟ್ಟರೆ ಅವರ ಜೀವನಕ್ಕೆ ತೊಂದರೆಯಾಗುತ್ತದೆ ಎಂದು ನಮಗೆ ಆರೋಪಿತರು ಬರೆದುಕೊಡುತ್ತಿಲ್ಲ ಎಂದರೆ ಸಾಕ್ಷಿ ನನಗೆ ಆಸ್ತಿಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ.2 ಆಗಾಗ ಗಲಾಟೆ ಮಾಡಿ ಆರೋಪಿತರಿಗೆ ಹಲ್ಲೆ ಮಾಡುತ್ತಿದ್ದೇವೆ ಎಂದರೆ ಸುಳ್ಳು. ಆ

ವಿಚಾರವಾಗಿ ಆರೋಪಿತರು ಅನೇಕ ಬಾರಿ ನಮ್ಮ ಮೇಲೆ ದೂರನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನಾನು ಅವರಿಗಿಂತ ಮೊದಲೇ ಪೊಲೀಸರಿಗೆ ದೂರನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ.

16. 2 ನೇ ಆರೋಪಿಯ ವಿರುದ್ಧ ನಾನು ಚಾಸಾ.2 ರವರಿಗೆ ಚಾಡಿ ಹೇಳಿಕೊಟ್ಟು ಚಾಸಾ.2 ರವರು 2 ನೇ ಆರೋಪಿಯ ಜೊತೆ ಗಲಾಟೆ ಮಾಡುತ್ತಿದ್ದರು ಎಂದರೆ ಸುಳ್ಳು. ನಾನು ಪೊಲೀಸರಿಗೆ ಸಿ.ಸಿ ಕ್ಯಾಮರದ ಫೂಟೇಜ್ ಅನ್ನು ನೀಡಿಲ್ಲ. ನಾವು 2 ಕ್ಯಾಮರಗಳನ್ನು ಹಾಕಿಸಿದ್ದೇವೆ. ನಾವು ಒಂದು ಕ್ಯಾಮರವನ್ನು ಆರೋಪಿತರ ಮನೆಯ ಒಳಗೆ ಕಾಣುವಂತೆ ಮತ್ತು ಅವರಿಗೆ ತೊಂದರೆಯಾಗುವಂತೆ ಅಳವಡಿಸಿದ್ದೇವೆ ಎಂದರೆ ಸುಳ್ಳು. ನಾವು ಆ ರೀತಿ ಮಾಡಬಾರದು ಎಂದು ಅವರು ಕೇಳಿದ್ದರಿಂದ ಅವರ ಜೊತೆ ಗಲಾಟೆ ಮಾಡಿದ್ದೆವು ಎಂದರೆ ಸುಳ್ಳು.

17. ದಿಃ 22.12.2024 ರಂದು 9.30 ರ ಸಮಯದಲ್ಲಿ ಅವಾಚ್ಯ ಶಬ್ದಗಳಿಂದ ಆರೋಪಿತರು ನಿಂದಿಸಿ ದೊಣ್ಣೆಯಿಂದ ಹೊಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಗಲಾಟೆಯಗಿದ್ದರೆ ಸಿ.ಸಿ ಕ್ಯಾಮರದ ಫೂಟೇಜ್ ಅನ್ನು ಪೊಲೀಸರಿಗೆ ನೀಡುತ್ತಿದ್ದೆ ಎಂದರೆ ಸಾಕ್ಷಿ ಗಲಾಟೆಯಾದ ಬಳಿಕ ಸಿ.ಸಿ ಕ್ಯಾಮರಗಳನ್ನು ಹಾಕಿಸಿದ್ದೇವೆ ಎಂದು ನುಡಿಯುತ್ತಾರೆ. ಗಲಾಟೆಯಾದ ಒಂದು ತಿಂಗಳ ಬಳಿಕ ಆ ಸಿ.ಸಿ ಕ್ಯಾಮರಗಳನ್ನು ಹಾಕಿಸಿದ್ದೇವೆ.

18. ಆರೋಪಿತರು ಹಲ್ಲೆ ಮಾಡಿದ ನನ್ನ ಹೊಟ್ಟೆಗೆ, ಎದೆಗೆ ಗಾಯವಾಗಿತ್ತು. ಹೊಟ್ಟೆಗೆ ಅಂಗೈ ಅಗಲದಷ್ಟು ಗಾಯ ಆಗಿತ್ತು. ಎದೆಯ ಎಡ ಭಾಗದ ಮೇಲೆ ಗಾಯ ಆಗಿತ್ತು. ರಕ್ತದ ಕಲೆ ಬಟ್ಟೆಗೆ ಆಗಿತ್ತಾ ಎಂದರೆ ಸಾಕ್ಷಿ ರಕ್ತ ಕಟ್ಟಿತ್ತು ಎಂದು ನುಡಿಯುತ್ತಾರೆ. ಮನೆಯ ಕೆಲಸ ಮಾಡುವಾಗ ಬಿದ್ದು ಆದ ಗಾಯವನ್ನು ಆರೋಪಿತರು ಹಲ್ಲೆ ಮಾಡಿದಾಗ ಆಗಿತ್ತು ಎಂದು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಹಲ್ಲೆ ಮಾಡಿದರು ಎಂದು ವೈದ್ಯರಿಗೆ ಸುಳ್ಳು ಮಾಹಿತಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸಂಜೆ 5.30 ರಿಂದ 6.00 ರ ಸುಮಾರಿಗೆ ಮಹಜರ್ ಗೆ ಬಂದಿದ್ದರು. 1 ಗಂಟೆಗಳ ಕಾಲ ಮಹಜರ್ ಬರೆದಿದ್ದರು. ಮಹಜರ್ ಗೆ ಸಹಿಯನ್ನು ಯಾರು ಮಾಡಿದ್ದರು ಎಂದರೆ ಸಾಕ್ಷಿ ಪೊಲೀಸರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಆ ವ್ಯಕ್ತಿ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿ ಮು.ಮಾ.1 ಅನ್ನು ವಶಕ್ಕೆ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಚಕ್ಕುಬಂದಿಯನ್ನು ಬರೆದಿದ್ದಾರೆ. ಘಟನೆಯ ಬಗ್ಗೆ ಪೊಲೀಸರಿಗೆ ಎಷ್ಟು ಬಾರಿ ಹೇಳಿಕೆ ನೀಡಿದ್ದೀರಿ ಎಂದರೆ ಸಾಕ್ಷಿ ನಾನು ಘಟನೆಯಾದ ಬಳಿಕ ಪೊಲೀಸರಿಗೆ ವಿಚಾರವನ್ನು ತಿಳಿಸುತ್ತಿದ್ದೆ, ಆರೋಪಿತರು ಪುನಃ ಹಲ್ಲೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿತರನ್ನು ಜೈಲಿಗೆ ಕಳುಹಿಸಿ ಅವರ ಎಲ್ಲಾ ಆಸ್ತಿಗಳನ್ನು ನಾವು ಹೊಡೆದುಕೊಳ್ಳುವ ಉದ್ದೇಶ ಹೊಂದಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ